JANUARY 24, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

**<><><>**

**ಭಾರತ ರತ್ನ,** ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತಗಾರ, ಪಂಡಿತ ಭೀಮಸೇನ ಜೋಷಿ ಅವರ ಪುಣ್ಯಸ್ಮರಣೆ ಇಂದು. ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಹಾಗೂ ಹಳಿಯಾಳ ಶಾಸಕ, ಆರ್.ವಿ. ದೇಶಪಾಂಡೆ ಸೇರಿದಂತೆ, ಅನೇಕ ಗಣ್ಯರು, ಪಂಡಿತ್‌ಜಿ ಸ್ಮೃತಿಗೆ, ಗೌರವ ನಮನ ಸಲ್ಲಿಸಿದ್ದಾರೆ.

<><><>

**ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಹಿನ್ನೆಲೆ,** ಸಚಿವರಾದ ಪ್ರಿಯಾಂಕ ಖರ್ಗೆ ಹಾಗೂ ದಿನೇಶ ಗುಂಡೂರಾವ ಶುಭಾಶಯ ಕೋರಿದ್ದಾರೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆಯಡಿ, ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿಗಳ, ಅರಿವು ಕೇಂದ್ರಗಳಲ್ಲಿ, 'ಓದುವ ಬೆಳಕು' ಕಾರ್ಯಕ್ರಮದಡಿ, 'ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ' ಆಯೋಜಿತವಾಗಿದೆ. ಲಿಂಗ ತಾರತಮ್ಯ, ದೌರ್ಜನ್ಯ, ಲಿಂಗಾನುಪಾತದಲ್ಲಿ ಅಸಮತೋಲನ, ಹೆಣ್ಣು ಭ್ರೂಣ ಹತ್ಯೆ, ಬಾಲ್ಯ ವಿವಾಹ, ಹೆಣ್ಣು ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿಸುವುದನ್ನು, ತಡೆಯಲು, ಜನ ಜಾಗೃತಿ ಮೂಡಿಸಲು, ವಿಶೇಷ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ.

<><><>

**ರಾಷ್ಟ್ರೀಯ ಹೆಣ್ಣು ಮಗು ದಿನದ ಪ್ರಯುಕ್ತ,** ಬೆಂಗಳೂರಿನ ಆರೋಗ್ಯ ಸೌಧ ಕಟ್ಟಡ, ಗುಲಾಬಿ ಬಣ್ಣದ ವಿದ್ಯುತ್ ದೀಪಗಳಿಂದ, ಅಲಂಕೃತಗೊಂಡು ಗಮನ ಸೆಳೆಯಿತು. ಪ್ರತಿ ಹೆಣ್ಣು ಮಗು ಪ್ರತಿ ಮನೆ–ಮನಗಳನ್ನು, ಈ ಸಮಾಜವನ್ನು, ದೀಪದಂತೆಯೇ ಸದಾ ಚೈತನ್ಯದಿಂದಿರಿಸುವ, ಅದ್ಭುತ ಶಕ್ತಿ. ಪ್ರತಿ ಹೆಣ್ಣು ಮಗುವಿನ ಸುರಕ್ಷತೆ ನಮ್ಮ ಹೊಣೆ, ಅವರಿಗೆ ಆತಂಕ ಮುಕ್ತ ವಾತಾವರಣ ನಿರ್ಮಿಸುವಲ್ಲಿ ಕೈ ಜೋಡಿಸಿ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮನವಿ ಮಾಡಿದೆ.

<><><>

**ಗರ್ಭಕಂಠದ ಕ್ಯಾನ್ಸರ್ ವಿರುದ್ಧ,** ಆರೋಗ್ಯ ಇಲಾಖೆ ಸಮರೋಪಾದಿಯಲ್ಲಿ ಕೆಲಸ ಮಾಡುತ್ತಿದ್ದು, ಕಲ್ಯಾಣ ಕರ್ನಾಟಕ ಮತ್ತು ಸುತ್ತಮುತ್ತಲ ಭಾಗದ, ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಓದುತ್ತಿರುವ, ಒಂದು ಲಕ್ಷಕ್ಕೂ ಅಧಿಕ, 14 ವರ್ಷದ ಹೆಣ್ಣುಮಕ್ಕಳಿಗೆ HPV ಲಸಿಕೆ ನೀಡಲಾಗುತ್ತದೆ ಎಂದು, ಆರೋಗ್ಯ ಸಚಿವ ದಿನೇಶ ಗುಂಡೂರಾವ್ ತಿಳಿಸಿದ್ದಾರೆ. ಈ ಯೋಜನೆಯನ್ನು, ರಾಜ್ಯಾದ್ಯಂತ ಸದ್ಯದಲ್ಲೇ ವಿಸ್ತರಿಸಲಾಗುವುದು ಎಂದು, ಎಕ್ಸ್ ಮಾಧ್ಯಮದಲ್ಲಿ, ಹೇಳಿದ್ದಾರೆ.

<><><>

**ಗಣರಾಜ್ಯೋತ್ಸವ ಧ್ವಜಾರೋಹಣದ** ಸಮಯದಲ್ಲಿ, ಕಂಬ ಏರಲು, ಮಕ್ಕಳ ಬಳಕೆ ನಿರ್ಬಂಧಿಸಿ, ಶಾಲಾ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ. ಪ್ರತಿ ತಾಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ, ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ, ಅತೀ ಹೆಚ್ಚು ಅಂಕ ಪಡೆದ, ಸರ್ಕಾರಿ

ಶಾಲೆಗಳ, ಮೂವರು ವಿದ್ಯಾರ್ಥಿಗಳಿಗೆ, ತಲಾ 50 ಸಾವಿರ ರೂಪಾಯಿ ನಗದು ಬಹುಮಾನ ನೀಡಲು, ಶಾಲಾ ಶಿಕ್ಷಣ ಇಲಾಖೆ, 3 ಕೋಟಿ 25 ಲಕ್ಷ ರೂಪಾಯಿ, ನೀಡಿದೆ.

<><><>

**ಉತ್ತರಕನ್ನಡ ಜಿಲ್ಲೆ, ಯೆಲ್ಲಾಪುರ, ಜೋಯಿಡಾ ಹಾಗೂ ಅಂಕೋಲಾದ,** ವನವಾಸಿ ಮಕ್ಕಳು ರಚಿಸಿದ, ಹಕ್ಕಿಗಳ ಚಿತ್ರಗಳ ವಿಶಿಷ್ಟ ಪ್ರದರ್ಶನ, ಮಂಗಳೂರಿನ ಬಲ್ಲಾಳಬಾಗ್‌ನ, ಪ್ರಸಾದ ಆರ್ಟ್ ಗ್ಯಾಲರಿಯಲ್ಲಿ, ಇಂದಿನಿಂದ ಮೂರು ದಿನಗಳ ಕಾಲ, ನಡೆಯಲಿದೆ. ಸಾರ್ವಜನಿಕರ ವೀಕ್ಷಣೆ ಮತ್ತು ಖರೀದಿಗೆ ಮುಕ್ತವಾಗಿದೆ. ಕಲಾವಿದ ದಿನೇಶ ಹೊಳ್ಳ ಅವರ ಮಾರ್ಗದರ್ಶನದಲ್ಲಿ, ಮಲಬಾರ್ ಪೈಯ್ಡ್ ಹಾರ್ನ್‌ಬಿಲ್ ಸೇರಿದಂತೆ, ಕಾನನದ ಅಪರೂಪದ ಹಕ್ಕಿಗಳನ್ನು, ವನ ಚೇತನದ, ಮಕ್ಕಳು ತಮ್ಮ ಕುಂಚದಲ್ಲಿ, ಅರಳಿಸಿದ್ದಾರೆ.

ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಪ್ರಯೋಗಶೀಲ ಶಿಕ್ಷಕ, ಅರವಿಂದ ಕುಡ್ಲ.

<><><>

**ಶಿಕ್ಷಕ ಅರವಿಂದ ಕುಡ್ಲ ಧ್ವನಿ 40 ಸೆಕೆಂಡುಗಳು**

<><><>

**ರಾಷ್ಟ್ರ ರಾಜಧಾನಿ, ಹೊಸ ದಿಲ್ಲಿಯ,** ಕರ್ತವ್ಯ ಪಥದಲ್ಲಿ, ಸೋಮವಾರ ನಡೆಯಲಿರುವ, ವರ್ಣರಂಜಿತ 77ನೇ ಗಣರಾಜ್ಯೋತ್ಸವ ಕವಾಯತಿಗೆ, ಸಕಲ ಸಿದ್ಧತೆಗಳು ಭರದಿಂದ ಸಾಗಿವೆ. ದೇಶದ ಸಂಸ್ಕೃತಿ, ಸೈನ್ಯ ಪರಾಕ್ರಮ ಮತ್ತು ಪ್ರಸಿದ್ಧ ವೀರ ಪರಂಪರೆಯನ್ನು ಪ್ರದರ್ಶಿಸಲಿದೆ. ಸಶಸ್ತ್ರ ಪಡೆಗಳ ವಿವಿಧ ತುಕಡಿಗಳು, ಪಥ ಸಂಚಲನ ಮತ್ತು ವಿವಿಧ ರಾಜ್ಯಗಳ ಸ್ತಬ್ಧಚಿತ್ರಗಳು, ವೈವಿಧ್ಯಮಯ ಸಾಮರ್ಥ್ಯಗಳು ಮತ್ತು ಸಾಂಸ್ಕೃತಿಕ ಒಳಗೊಳ್ಳುವಿಕೆಗೆ, ಕವಾಯತು ವೇದಿಕೆಯಾಗಲಿದೆ.

<><><>

**ವಾರಕ್ಕೆ ಐದು ದಿನಗಳ** ಕೆಲಸದ ನೀತಿಯನ್ನು, ಜಾರಿಗೊಳಿಸಬೇಕೆಂಬ ದೀರ್ಘಕಾಲದ ಬೇಡಿಕೆಯನ್ನು ಈಡೇರಿಸುವಂತೆ ಒತ್ತಾಯಿಸಿ, ಬ್ಯಾಂಕ್ ನೌಕರರ ಒಕ್ಕೂಟ ಯು.ಎಫ್.ಬಿ.ಯು, ಮಂಗಳವಾರ 27ನೇ ತಾರೀಖಿನಿಂದ, ರಾಷ್ಟ್ರವ್ಯಾಪಿ ಪ್ರತಿಭಟನೆಗೆ ನಿರ್ಧರಿಸಿದೆ. ಒಂದೊಮ್ಮೆ ಪ್ರತಿಭಟನೆ ನಡೆದರೆ, 25 ಭಾನುವಾರ, 26 ಗಣರಾಜ್ಯೋತ್ಸವ ಹಾಗೂ 27ಕ್ಕೆ ಬ್ಯಾಂಕ್ ನೌಕರರ ಮುಷ್ಕರದಿಂದ, ಗ್ರಾಹಕರಿಗೆ ಸೇವೆ ಒದಗಿಸುವಲ್ಲಿ ತೊಂದರೆಯಾಗಬಹುದು ಎಂದು, ವಿವಿಧ ಬ್ಯಾಂಕ್‌ಗಳ ಸಿಬ್ಬಂದಿ, ಗ್ರಾಹಕರಿಗೆ ಮಾಹಿತಿ ನೀಡಿದ್ದಾಗಿ, ವರದಿಯಾಗಿದೆ.

<><><>

**ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರ,** ವಿಧಾನ ಮಂಡಲದ ಜಂಟಿ ಅಧಿವೇಶನವನ್ನುದ್ದೇಶಿಸಿ ಮಾಡಿದ ಭಾಷಣದ ಮೇಲಿನ, ವಂದನಾ ನಿರ್ಣಯದ ಕುರಿತು, ಬರುವ ಮಂಗಳವಾರ ಹಾಗೂ ಬುಧವಾರ, 27 ಮತ್ತು 28 ರಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿ, ಉತ್ತರಿಸಲಿದ್ದಾರೆ ಎಂದು, ಸಭಾಧ್ಯಕ್ಷ ಯು.ಟಿ. ಖಾದರ್ ತಿಳಿಸಿದ್ದಾರೆ.

**ದಿನಾಂಕ 29 ರಿಂದ 31ರ ವರೆಗೆ,** ವಿಕಸಿತ ಭಾರತ, ಜಿ ರಾಮ್ ಜಿ ಕಾಯ್ದೆಯ ನಿರ್ಣಯ ಕುರಿತು, ವಿಧಾನ ಮಂಡಲದಲ್ಲಿ ಚರ್ಚೆ ನಡೆಯಲಿದೆ. 31ನೇ ತಾರೀಖು, ಮುಖ್ಯಮಂತ್ರಿ ಸದನದಲ್ಲಿ ಉತ್ತರಿಸಲಿದ್ದಾರೆ, ಎಂದು, ವಿಧಾನಸಭಾಧ್ಯಕ್ಷರು ಹೇಳಿದರು.

**ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ** ಆರೋಪದ ತನಿಖೆ, ರಾಜ್ಯಪಾಲರ ನಿರ್ಗಮನದ ವೇಳೆ, ಆಡಳಿತ ಪಕ್ಷ ಕಾಂಗ್ರೆಸ್‌ನ ಶಾಸಕರು, ಶಿಷ್ಟಾಚಾರ ಮುರಿದಿದ್ದು, ರಾಷ್ಟ್ರಗೀತೆಗೆ ಅವಮಾನ ಮಾಡಿದ್ದು, ಆ ಬಗ್ಗೆ ಮೊದಲು ಚರ್ಚೆಯಾಗಲಿ ಎಂದು, ವಿಪಕ್ಷ ಬಿಜೆಪಿ ನಾಯಕರು, ಉಭಯ ಸದನಗಳಲ್ಲಿ ಕೋಲಾಹಲ ಮುಂದುವರೆಸಿದ ಹಿನ್ನೆಲೆ, ಮಂಗಳವಾರದ ವರೆಗೆ, ಸದನವನ್ನು ಮುಂದೂಡಲಾಯಿತು. ಅಂದು ಬೆಳಗ್ಗೆ 10 ಗಂಟೆಗೆ, ಕಲಾಪ ಆರಂಭವಾಗಲಿದೆ.

<><><>

**ರಾಷ್ಟ್ರೀಯ ಮತದಾರ ದಿನಾಚರಣೆ ಪ್ರಯುಕ್ತ,** ಸಮಾಜ ಕಲ್ಯಾಣ ಇಲಾಖೆ ರೂಪಿಸಿರುವ, ಕನ್ನಡ ಸಿನೆಮಾ 'ಮತದಾರ ಪ್ರಭುಗಳು', ನಾಳೆ ಭಾನುವಾರ ಮಧ್ಯಾಹ್ನ, 2 ಗಂಟೆಯಿಂದ 4:30ರ ವರೆಗೆ, ದೂರದರ್ಶನ ಚಂದನ ವಾಹಿನಿಯಲ್ಲಿ, ಪ್ರಸಾರವಾಗಲಿದೆ. ನ್ಯಾಯಸಮ್ಮತ ಚುನಾವಣೆ ಕುರಿತಂತೆ, ಸಂವಿಧಾನ ವ್ಯಕ್ತ ಪಡಿಸಿರುವ ಸದಾಶಯಗಳ ಮೇಲೆ, ಸಿನೆಮಾ ಬೆಳಕು ಚೆಲ್ಲುತ್ತದೆ ಎಂದು, ಚಿತ್ರದ ನಿರ್ದೇಶಕ, ಎಚ್. ಅನಂತರಾಯಪ್ಪ ತಿಳಿಸಿದ್ದಾರೆ. ಮತದಾರರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ, ನಿರ್ಮಾಣಗೊಂಡಿದೆ ಎಂದು, ಸಮಾಜ ಕಲ್ಯಾಣ ಇಲಾಖೆ ಆಯುಕ್ತರ ಪ್ರಕಟಣೆ ತಿಳಿಸಿದೆ.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**